International Journal of Kannada Research
www.kannadajournal.com

ISSN: 2454–5813
IJKR 2019; 5(4): 160-163
© 2019 IJKR
www.kannadajournal.com
Received: 25-08-2019
Accepted: 27-09-2019

**Dr. Srinivasa T**
Assistant Professor, Dept of Kannada, Vidyavardhaka First Grade College, Sheshadri Iyer Road, Mysuru, Karnataka, India

**Corresponding Author:**
**Dr. Srinivasa T**
Assistant Professor, Dept of Kannada, Vidyavardhaka First Grade College, Sheshadri Iyer Road, Mysuru, Karnataka, India

# ವಚನ ಸಾಹಿತ್ಯದಲ್ಲಿ ಧರ್ಮದ ವಿಶ್ಲೇಷಣೆ

**Dr. Srinivasa T**

ಧರ್ಮ ಮತ್ತು ಜಾತಿಯ ಅಂಧಕಾರದಲ್ಲಿ ಸೊರಗುತ್ತಿರುವ ಆಧುನಿಕ ಸಮಾಜಕ್ಕೆ ಚಿಕಿತ್ಸೆಯ ಅನಿವಾರ್ಯತೆ ಇದೆ. ಆ ಚಿಕಿತ್ಸೆ ಬಾಹ್ಯವಾದದ್ದಲ್ಲ, ಆಂತರಿಕವಾದದ್ದು. ಬೌದ್ಧಿಕವಾದದ್ದು ಮತ್ತು ವೈಚಾರಿಕವಾದದ್ದು. ಅದಕ್ಕೆ ಬೇಕಾಗಿರುವ ನಿಜವಾದ ಚಿಕಿತ್ಸೆ ಎಂದರೆ ಅದು ಸಮತಾವಾದದ್ದು ಮತ್ತು ಸಮಾಜವಾದದ್ದು. ಅದನ್ನು ಶೋಧಿಸಬೇಕೆಂದರೆ ನಾವು 12ನೇ ಶತಮಾನದ ಸಾಮಾಜಿಕ ಕ್ರಾಂತಿಯತ್ತ ದೃಷ್ಟಿ ಹರಿಸಬೇಕು. ಬಹುಶಃ ಮಾನವ ಕುಲಕ್ಕೆ ತುಂಬಾ ಅಗತ್ಯವಾದ ತ್ರಾಣ ಸಿಗುವುದು ಅಲ್ಲಿಂದಲೇ ಎನ್ನುವುದು ನನ್ನ ಭಾವನೆ.

"ಇವನಾರವ, ಇವನಾರವ ಎಂದೆನ್ನದಿರಯ್ಯ ಇವ ನಮ್ಮವ, ಇವ ನಮ್ಮವ ಎಂದೆನ್ನಿರಯ್ಯ" ಎಂದು ಸಮಾಜದ ಮೇಲು ಕೀಳಿನ ತರತಮಭಾವಗಳನ್ನು ಹೋಗಲಾಡಿಸಲು ಶ್ರಮಿಸಿದವರು ವಚನಕಾರರು, ಆ ಮೂಲಕ ಸಾಮಾಜಿಕ ಮತ್ತು ಧಾರ್ಮಿಕ ಕ್ರಾಂತಿಗೆ ಮುನ್ನುಡಿ ಬರೆದ ವಿಶ್ವಗುರು ಬಸವಣ್ಣಾದಿ ಪ್ರಮುಖರು ಮತ್ತು ಆ ಕಾಲದ ಎಲ್ಲ ತಳ ಸಮುದಾಯದ ವಚನಕಾರರು.

ಸಮಾಜದ ಎಲ್ಲ ವರ್ಗದ ಜನರನ್ನು ಒಗ್ಗೂಡಿಸಿದ ಬಸವಣ್ಣ, ಜಾತೀಯತೆಯ ವಿರುದ್ಧ ಸಮರ ಸಾರಿದರು. "ನೆಲವೊಂದೇ ಹೊಲಗೇರಿ ಶಿವಾಲಯಕ್ಕೆ ಜಲವೊಂದೇ ಶೌಚಾ ಚಮನಕ್ಕೆ! ಕುಲವೊಂದೇ ತನ್ನ ತಾನರಿದವಂಗೆ ! ಫಲವೊಂದೇ ಷಡ್ದರ್ಶನ ಮುಕ್ತಿಗೆ ನಬಿಲವೊಂದೇ ಕೂಡಲ ಸಂಗಮದೇವ ನಿಮ್ಮನರಿದವಂಗೆ" ಎಂದು ಶಿವ ಸಾನ್ನಿಧ್ಯದ ದಾರಿ ತೋರಿದರು. "ಸ್ಥಾವರಕ್ಕೆ ಅಳಿವುಂಟು ಜಗಮಕ್ಕೆ ಅಳಿವಿಲ್ಲ" ಎಂದು ಸ್ಥಾವರ ಪರಿಕಲ್ಪನೆಯನ್ನು ಸಾರಾಸಗಟಾಗಿ ತಿರಸ್ಕರಿಸಿದ ಅವರು ನಾವು ಆಚರಿಸುವ ಆಚರಣೆಗಳಿಂದ ಮಾತ್ರ ಉತ್ತಮ, ಅಧಮರೆನಿಸಿಕೊಳ್ಳುತ್ತೇವೆ ಹೊರತು ಜಾತಿಯಿಂದಲ್ಲ. ಇರುವುದೊಂದೇ ನೆಲ ಅಲ್ಲಿ ಶಿವಾಲಯಕಟ್ಟಿದರೆ ಪುಣ್ಯಕ್ಷೇತ್ರ, ದುರಾಚಾರಿಗಳ ತಾಣವಾದರೆ ಅದು ಹೊಲಗೇರಿ. ಜಲ ಒಂದೇ ಅದನ್ನು ಪೂಜೆಗೆ ಬಳಸಿದರೆ ತೀರ್ಥ, ಶೌಚಕ್ಕೆ ಬಳಸಿದರೆ ಕೊಳಕು. ಅಂತೆಯೇ ಕಾರ್ಯದಿಂದ ಮಾನವ ಕುಲವು ಜ್ಞಾನದಿಂದ ಉತ್ತಮ, ಅಜ್ಞಾನದಿಂದ ಅಧಮ. ಆಯಾ ಜಾತಿಗಳ ಗುರಿ ಒಂದೇ ಅದುವೇ ಮುಕ್ತಿ. ಮೇಲು ಕೀಳೆಂಬ ಜಾತಿಯ ವಿಂಗಡಣೆಯನ್ನು ತಮ್ಮ ವಚನಗಳಲ್ಲಿ ಖಂಡಿಸಿದರು.

ಅಂಗದಿಚ್ಚೆಗೆ ಮದ್ಯಮಾಂಸವ ತಿಂಬರು,
ಕಂಗಳಿಚ್ಚೆಗೆ ಪರವಧುವ ನೆರೆವರು.
ಲಿಂಗಲಾಂಛನಧಾರಿಯಾದಲ್ಲಿ ಫಲವೇನು
ಲಿಂಗಪಥವ ತಪ್ಪಿ ನಡೆವವರು
ಜಂಗಮಮುಖದಿಂದ ನಿಂದೆ ಬಂದಡೆ
ಕೊಂಡ ಮಾರಿಂಗೆ ಹೋಹುದು ತಪ್ಪದು
ಕೂಡಲಸಂಗಮದೇವಾ. ಎಂದರು.

12ನೇ ಶತಮಾನ ಮತ್ತು ಅದರ ಪೂರ್ವದಲ್ಲಿ ತಳಸಮುದಾಯಗಳಿಗೆ ಧರ್ಮವೂ ಇರಲಿಲ್ಲ, ದೇವರೂ ಇರಲಿಲ್ಲ, ಸಮಾಜದಲ್ಲಿ ಗೌರವವೂ ಇರಲಿಲ್ಲ. ಚಾತುರ್ವರ್ಣ ಪದ್ಧತಿ ಸಮಾಜವನ್ನು ಮುಕ್ಕುತ್ತಿತ್ತು. ಸಂಪ್ರದಾಯವಾದಿಗಳ ಕಪಿಮುಷ್ಠಿಯಲ್ಲಿ ಮಾನವಕುಲ ನಲುಗುತ್ತಿತ್ತು. ತಳ ಸಮುದಾಯದ ಜನರಿಗೆ ಮಾತನಾಡುವ, ಓದುವ, ನಡುರಸ್ತೆಯಲ್ಲಿ ಓಡಾಡುವ ಸ್ವಾತಂತ್ರ್ಯವೂ ಇಲ್ಲದ ಒಂದು ಕ್ರೂರ ವ್ಯವಸ್ಥೆ ಜಾರಿಯಲ್ಲಿತ್ತು. ಅಂಥ ಸಂಕೀರ್ಣ ಸನ್ನಿವೇಶದಲ್ಲಿ ವಚನಕಾರರು ಸಾಮಾಜಿಕ ಸಮಾನತೆಗಾಗಿ

ಸಾಂಸ್ಕೃತಿಕ ಕ್ರಾಂತಿಯನ್ನೆ ಮಾಡಿದರು. ಆಗ ಸ್ವತಂತ್ರ ಮತ್ತು ಪ್ರಜಾಸತ್ತಾತ್ಮಕವಾದ ಒಂದು ಧರ್ಮದ ಉದಯಕ್ಕೆ ಭಾರತದ ಭೂಮಿ ಹದವಾಗಿತ್ತು. ಅದನ್ನು ಅರಿತು ಬಸವಣ್ಣ ವೈದಿಕ ಕಟ್ಟಳೆಗಳ ಸೋಂಕಿಲ್ಲದ ಸರ್ವಸಮ್ಮತವಾದ ಲಿಂಗಾಯತ ಧರ್ಮದ ಬೀಜವನ್ನು ಈ ಮಣ್ಣಿನಲ್ಲಿ ಊರಿದರು. ಅದು ಇಂದು ಹೆಮ್ಮರವಾಗಿ ಬೆಳೆದಿದೆ. ಅವರ ಪರಿಕಲ್ಪನೆಯ ಧರ್ಮದಲ್ಲಿ ದೇವರೂ ಇಲ್ಲ, ಜಾತಿಯೂ ಇಲ್ಲ, ಸ್ಥಾವರಗಳೂ ಇಲ್ಲ. ಇರುವುದೊಂದೇ ಅದು ಇಷ್ಟಲಿಂಗ ಪೂಜೆ. ಇಲ್ಲಿ ಮನುಷ್ಯನ ದೇಹವೇ ದೇವಾಲಯ.

ವೈದಿಕರು ತಳಸಮುದಾಯದವರನ್ನು ಮಂದಿರದೊಳಗೆ ಬಿಟ್ಟುಕೊಳ್ಳಲಿಲ್ಲ ಎಂದು ಕೊರಗುವ ಬದಲು ತಾವು ಧರಿಸಿರುವ ಲಿಂಗದಲ್ಲೇ ದೇವರನ್ನು ಕಾಣು, ನಿನ್ನ ಕಾಲೇ ಕಂಬ, ದೇಹವೇ ದೇಗುಲ, ಅರಿವು ಮೂಡಿಸಿಕೊಂಡರೆ ಶಿರ ಹೊನ್ನ ಕಳಶವಾಗುತ್ತದೆ. ಇವೆಲ್ಲವೂ ನಿನ್ನಲ್ಲೇ ಇರುವಾಗ ಮತ್ತೆ ಮಂದಿರವೇಕೆ? ಎಂದು ಸ್ಥಾವರದ ಗೊಡವೆಯನ್ನೇ ಜನಮಾನಸದಿಂದ ಕಿತ್ತೊಗೆದ ಬಸವಣ್ಣ 'ಸ್ಥಾವರಕ್ಕಳಿವುಂಟು ಜಂಗಮಕ್ಕಳಿವಿಲ್ಲ' ನಡೆದಾಡುವ ಮನುಷ್ಯನೇ ಧರ್ಮದ ಮೂಲ ಪ್ರಾಣ ಎಂದು ಸ್ಥಾವರ ಸಂಸ್ಕೃತಿಯನ್ನು ದಟ್ಟ ತಿರಸ್ಕಾರದಿಂದ ನೋಡಿದ. ಇಂಥ ಅಪರೂಪದ ಪರಿಲಕ್ಪನೆಯ ಧರ್ಮ ಜಗತ್ತಿನಲ್ಲಿ ಎಲ್ಲೂ ಇಲ್ಲ, ಇದು ನಮ್ಮ ಕನ್ನಡನಾಡಿನ ಹೆಮ್ಮೆ.

ಸಮತಾವಾದ, ಸಮಾಜವಾದ, ಪ್ರಜಾಪ್ರಭುತ್ವದ ಸಮಾನತೆ ಇವೆಲ್ಲವನ್ನೂ ಬಸವಣ್ಣ ಒಂಬೈನೂರು ವರ್ಷಗಳ ಹಿಂದೆಯೇ ಸಾಧಿಸಿ ತೋರಿಸಿದ್ದಾರೆ. ವಚನ ಸಾಹಿತ್ಯ ಸಮಾಜದ ಹೃದಯದ ಅಸ್ಮಿತೆಯೊಳಗಿಂದ ಮೂಡಿ ಬಂದಿದ್ದರಿಂದ ಎಲ್ಲರೂ ಅದರಲ್ಲಿ ಸೇರಿದರು. ಇದು ಎಲ್ಲ ವರ್ಣ, ವರ್ಗದವರೂ ಒಪ್ಪಲೇಬೇಕಾದ ಮತ್ತು ಒಪ್ಪದೇ ಇರಲಾಗದ ರೀತಿಯಲ್ಲಿ ಸಾಮಾಜಿಕ ಸಮಾನತೆಯನ್ನು ಸಾಧಿಸಿ ತೋರಿದರು.

ಬಸವ ಯುಗದಲ್ಲಿ ಇಸ್ಲಾಂ, ಕ್ರೈಸ್ಥ ಧರ್ಮಗಳು ಇನ್ನೂ ಭಾರತ ಪ್ರವೇಶ ಮಾಡಿರಲಿಲ್ಲವಾದ್ದರಿಂದ ಆಗ ಅನ್ಯ ಧರ್ಮಿಯರ ಪ್ರವೇಶ ಎನ್ನುವ ವಾದವೇ ಅಪ್ರಸ್ತುತವಾಗಿತ್ತು. ಇಂಥ ಉದಾತ್ತ ಚಿಂತನೆಯು ಅರಳಿದ್ದು ಶತಮಾನದ ವಚನಕಾರರ ಮೂಸೆಯಲ್ಲಿ ಎಂಬುದು ವಿಶೇಷ.

ಒಂಬತ್ತು ಶತಮಾನಗಳ ಹಿಂದೆ ಭಾರತದಲ್ಲಿ ವೈದಿಕಶಾಹಿ ಅತ್ಯಂತ ಪ್ರಭಾವಶಾಲಿಯಾಗಿತ್ತು. ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರರೆಂಬ ಚಾತುರ್ವರ್ಣ ಪದ್ಧತಿಯಿಂದ ಹೊರಗಿರುವವರನ್ನು ಅಸ್ಪೃಶ್ಯರೆಂದು ಅವರನ್ನು ಅತ್ಯಂತ ನಿಕೃಷ್ಟವಾಗಿ ಕಾಣಲಾಗುತ್ತಿತ್ತು. ಸಮಾಜದಲ್ಲಿ ಅನೇಕ ಮೂಢನಂಬಿಕೆಗಳು, ಕಂದಾಚಾರಗಳು ಬಹುದೇವೋಪಾಸನೆಗಳು, ಸ್ತ್ರೀ ಶೋಷಣೆ, ಅಸ್ಪೃಶ್ಯತೆ ಆಚರಣೆಯಲ್ಲಿದ್ದವು. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಜನರ ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಅವರ ಆಶೋತ್ತರಗಳ ಅಭಿವ್ಯಕ್ತಿಯಾಗಿ ರೂಪುಗೊಂಡ ಧರ್ಮವೊಂದು ಜಗತ್ತಿನಲ್ಲಿದ್ದರೆ ಅದು ಲಿಂಗಾಯತ ಧರ್ಮ ಎನ್ನುವುದು ನಿರ್ವಿವಾದ. ಧರ್ಮದ ಆಚರಣೆ ಮನುಷ್ಯನಿಂದ ಆಗಬೇಕೆ ಹೊರತು ಮನುಷ್ಯ, ಧರ್ಮದ ಗುಲಾಮನಾಗಬಾರದು ಎಂದು ಅತ್ಯಂತ ಸ್ಪಷ್ಟವಾಗಿ ಪ್ರತಿಪಾದಿಸಿ ಇಷ್ಟಲಿಂಗ ಪೂಜೆ ಎನ್ನುವ ಬಹು ವಿಶಿಷ್ಟ ಪರಿಕಲ್ಪನೆಯನ್ನು ಪರಿಚಯಿಸಿದವರು ಶರಣರು. ಕಾಯಕದಿಂದ ಮನುಷ್ಯನ ಆತ್ಮ ಶುದ್ಧವಾಗಿ ಪಾರಮಾರ್ಥಿಕ ಸುಖ ಕಾಣುತ್ತಾನೆ ಎಂದು ಮಾನವನನ್ನೇ ಮಹಾದೇವನನ್ನಾಗಿಸಿದವರು ವಚನಕಾರರು. ಧರ್ಮದ ವ್ಯಾಪ್ತಿ ಮತ್ತು ವಿಸ್ತಾರವನ್ನು ಬಸವಣ್ಣನಷ್ಟು ಸರಳವಾಗಿ ಹೇಳಿದವರು ಮತ್ತೊಬ್ಬರಿಲ್ಲ. ಅದಕ್ಕೆ ಬಸವಣ್ಣನ ವಚನಗಳೇ ಸಾಕ್ಷಿ. ಸಮಾನತೆ, ಭ್ರಾತೃತ್ವ, ನೈತಿಕ ಎಚ್ಚರ, ಪ್ರಗತಿ, ಸಮೃದ್ಧಿ ಮತ್ತು ಜ್ಞಾನದ ವಿಕಾಸದ ಸಂಕೇತವೇ ಲಿಂಗಾಯತ ಧರ್ಮ. ಸಮಾಜದಲ್ಲಿರುವ ಜಾತೀಯತೆ, ಅಸಮಾನತೆ, ಅಂಧಕಾರ, ಅಜ್ಞಾನ, ಅಸ್ಪೃಶ್ಯತೆ ಮತ್ತು ಶೋಷಣೆ ಅಳಿಸಿ ಕಲ್ಯಾಣ ರಾಜ್ಯ ಸ್ಥಾಪನೆಗೆ ಬದ್ಧನಾದ. ಸಮಾನತೆಯ ತತ್ವಗಳನ್ನು ಎತ್ತಿಹಿಡಿಯುವ ಮೂಲಕ ತುಳಿತಕ್ಕೊಳಗಾದ ದೀನ ದಲಿತರಿಗೆ, ಅಸ್ಪೃಶ್ಯರಿಗೆ ಸಮಾಜದ ಮುಖ್ಯವಾಹಿನಿಗೆ ಬರಲು ಅವಕಾಶ ನೀಡಿದವರು ವಚನಕಾರರು.

ವಚನ ಚಳವಳಿಯಲ್ಲಿ ತಳಸಮುದಾಯದಿಂದ ಮುಖ್ಯವಾಹಿನಿಗೆ ಬಂದವರೆಲ್ಲ ತುಳಿತಕ್ಕೊಳಗಾದವರೇ ಆದ್ದರಿಂದಲೇ ಬಸವಣ್ಣ ತಮ್ಮ ಒಂದು ವಚನದಲ್ಲಿ ಹೀಗೆ ವಿವರಿಸಿದ್ದಾರೆ.

> ಎನ್ನ ಕಾಯದ ಕರಸ್ಥಲದಲ್ಲಿ ಅಲ್ಲಮಪ್ರಭುದೇವರ ಕಂಡೆನು,
> ಎನ್ನ ಮನದ ಕರಸ್ಥಲದಲ್ಲಿ ಚೆನ್ನಬಸವಣ್ಣನ ಕಂಡೆನು,
> ಎನ್ನ ಅರಿವಿನ ಕರಸ್ಥಲದಲ್ಲಿ ಮಡಿವಾಳಯ್ಯನ ಕಂಡೆನು.
> ಒಳಗು ಹೊರಗು, ಹೊರಗು ಒಳಗೆಂಬ ಭೇದವನರಿಯದೆ ಇದ್ದೆನು.
> ಕೂಡಲಸಂಗಮದೇವಯ್ಯಾ,ನಿಮ್ಮ ಶರಣರು ಎನ್ನ ಪಾವನವ
> ಮಾಡಿದ ಪರಿಣಾಮವ ಅಂತಿಂತೆನಲಮ್ಮದೆ ನಮೋ ನಮೋ ಎನುತ್ತಿದ್ದೆನು.

ಆಧುನಿಕತೆಯ ಈ ಕಾಲಘಟ್ಟದಲ್ಲಿ ವಚನಗಳನ್ನು ಒಂದು ಧರ್ಮ, ಜಾತಿಯ ಸಕೀರ್ಣ ಚೌಕಟ್ಟಿನಲ್ಲಿ ನೋಡಲಾಗುತ್ತಿದೆ. ದೃಷ್ಟಿಯ ಸಂಕೀರ್ಣತೆ ಮತ್ತು ವಿಚಾರದ ಬೀಸಿನ ಕೊರತೆ ಇಂಥ ಆಲೋಚನೆಗೆ ಕಾರಣ ಎನ್ನಬಹುದು. ಕರಿಕಾಲ ಚೋಳನಂತಹ ಅರಸನನ್ನು ಬಿಟ್ಟು ಮಾದಾರ ಚನ್ನಯ್ಯನಂಥ ಕೆಳ ಸಮುದಾಯದ ಭಕ್ತನ ಮನೆಯಲ್ಲಿ ಬಸವಣ್ಣ ಪ್ರಸಾದ ಸೇವಿಸಿದ್ದು ಮತ್ತು ಆ ಮೂಲಕ ಸಮಾಜಕ್ಕೆ ಸಮಾನತೆಯ ಸಂದೇಶ ಸಾರಿದ್ದು ಚಿಕ್ಕ ಮಾತಲ್ಲ. ಇಂದಿಗೂ ಪಂಕ್ತಿಭೇದದ ಮಾತುಗಳು ಕೇಳಿ ಬರುತ್ತಿವೆ ಎಂದರೆ ಸಮಾಜ ಆಗ ಎಷ್ಟು ವಿಷಮವಾಗಿತ್ತು, ಧರ್ಮದ ಕಟ್ಟಳೆಗಳು ಎಷ್ಟು ಜಿಗುಟಾಗಿದ್ದವು ಎನ್ನುವುದು ಎಂಥ ಅನಕ್ಷರಸ್ಥನಿಗೂ ಮನವರಿಕೆಯಾಗುತ್ತದೆ.

ಬಹಳಷ್ಟು ವಚನಕಾರರು ಅವೈದಿಕರು ಎನ್ನುವುದು ಮುಖ್ಯ. ಕಾಯಕ ನಿಷ್ಟೆ, ಮಾನವತಾವಾದದಲ್ಲಿ ದೃಢವಿಶ್ವಾಸವಿದ್ದಂತಹ ಮೌಲಿಕ ವಿಚಾರಗಳನ್ನು ವಚನದ ಮೂಲಕ ಹರಡಿದ ಬಸವಣ್ಣ ಮತ್ತು ಎಲ್ಲ ವಚನಕಾರರು ನಡೆಸಿದ ಕ್ರಾಂತಿ ಇಂದಿಗೂ ಚಿಂತಕರಿಗೆ ದಾರಿದೀಪ. ಬಿಜ್ಜಳನ ಆಸ್ಥಾನದ ಮಂತ್ರಿಯಾಗಿ ಭಂಡಾರ ಕಾಯ್ದು ಭಂಡಾರಿಯಾಗಿ, ನಂತರ ಭಕ್ತಿ ಭಂಡಾರಿ ಬಸವಣ್ಣನಾದ. ಬಸವಣ್ಣನವರಲ್ಲಿ ಇದ್ದ ಸಾಮಾಜಿಕ ಕಳಕಳಿ ಮತ್ತು ಕ್ರಾಂತಿಕಾರಕ ಆಲೋಚನೆಗಳು ಸಾಮಾಜಿಕ ಪಿಡುಗುಗಳನ್ನು ಅಳಿಸಿಹಾಕುವುದಕ್ಕೆ ಪ್ರೇರೇಪಿಸಿತು. ಜಾತಿ ಮತಗಳ ಬೇದ ಭಾವ ತೊಡೆದು ಹಾಕಿ ಎಲ್ಲರನ್ನು ಸಮಾಜದ ಮುಖ್ಯವಾಹಿನಿಗೆ ತರುವ ಸಲುವಾಗಿ ಅನುಭವ ಮಂಟಪವನ್ನು ಸ್ಥಾಪಿಸಿದರು. ಅಲ್ಲಮ ಪ್ರಭು ಸಿದ್ದರಾಮ, ಅಕ್ಕ ಮಹಾದೇವಿ ಮಡಿವಾಳ ಮಾಚಿದೇವ, ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ ಮುಂತಾದವರು ಬಸವಣ್ಣನವರ ಸಮಕಾಲಿನರು. ಸಮಾಜದ ಎಲ್ಲ ವರ್ಗದ ಜನರು ಒಂದೆಡೆ ಸೇರಿ ಧರ್ಮದಿಂದ ರಾಜಕೀಯದವರೆಗೆ ಮುಕ್ತವಾಗಿ ಚರ್ಚಿಸಲು ಅನುಭವ ಮಂಟಪ ವೇದಿಕೆಯಾಯಿತು. ಬಸವಣ್ಣನವರ ಪ್ರೇರಣೆಯಿಂದ ಹರಿಜನ ಮತ್ತು ಬ್ರಾಹ್ಮಣ ಕುಟುಂಬಗಳ ನಡುವೆ ನಡೆದ ವಿವಾಹ ಕಲ್ಯಾಣದ ಕ್ರಾಂತಿಗೆ ಮುನ್ನುಡಿಯಾಯಿತು. ಈ ದೇಶದಲ್ಲಿ ಜಾತಿ ಅಳಿಸಿಹಾಕಲು ಬಸವಣ್ಣ ಇಟ್ಟ ಕ್ರಾಂತಿಕಾರಕ ಹೆಜ್ಜೆ ಅದು.

ಒಂದು ಧರ್ಮ ಬರೀ ಪೂಜೆ ಪುರಾಣಗಳನ್ನು ಹೇಳಿದರೆ ಸಾಲದು ಅದರ ಬಹುಮುಖ್ಯ ಉದ್ದೇಶ ಮನುಷ್ಯನ ಸಚ್ಚಾರಿತ್ರ್ಯ ತಿಳಿಸುವುದು. ಧರ್ಮ ಅಂತಹ ಕಾರ್ಯವನ್ನು ಮಾಡದಿದ್ದರೆ ಅದರ ಅವನತಿ ಖಚಿತ ಎನ್ನುತ್ತಾನೆ ಬಸವಣ್ಣ. ಅದು ಬರೀ ವಿಚಾರದ ಗೊಂಚಲಾಗಿರದೆ ಚಲನೆಯಲ್ಲಿರಬೇಕು ಎಂದು ವಾದಿಸುತ್ತಾನೆ.

ಎನಿಸು ಕಾಲ ಕಲ್ಲು ನೀರೊಳಗಿದ್ದಡೇನು,
ನೆನೆದು ಮೃದುವಾಗಬಲ್ಲುದೆ
ಎನಿಸು ಕಾಲ ನಿಮ್ಮ ಪೂಜಿಸಿ ಏವೆನಯ್ಯಾ,
ಮನದಲ್ಲಿ ದೃಡವಿಲ್ಲದನ್ನಕ್ಕ
ನಿಧಾನವ ಕಾಯ್ದಿರ್ದ ಬೆಂತರನಂತೆ
ಅದರ ವಿಧಿ ಎನಗಾಯಿತ್ತು, ಕೂಡಲಸಂಗಮದೇವಾ.

ಧರ್ಮದ ವಿಶಾಲತೆಯ ಅನಿವಾರ್ಯವನ್ನು ಒತ್ತಿ ಹೇಳುವ ಬಸವಣ್ಣ ಚಲನಶೀಲತೆ ಇಲ್ಲದ ಧರ್ಮ ಅವನತಿ ಹೊಂದುತ್ತದೆ ಎನ್ನುವುದು ಅವರ ಸ್ಪಷ್ಟ ನಿಲುವು. ಪ್ರತಿಯೊಬ್ಬರಿಗೂ ಧರ್ಮ ಅನುಸರಣೆಗೆ ಬರಬೇಕು. ಇಲ್ಲದಿದ್ದರೆ ಆ ಧರ್ಮ ಬೋಧನೆಗೆ ಸೀಮಿತವಾಗುತ್ತದೆ. ಅನಕ್ಷರಸ್ಥನಿಗೂ ಧರ್ಮದ ಸಾರ ತಲುಪಬೇಕು ಎಂಬುದು ಬಸವಣ್ಣ ಸೇರಿದಂತೆ ಎಲ್ಲ ವಚನಕಾರರ ಆಶಯವಾಗಿತ್ತು. ಅದನ್ನೆಲ್ಲ ವಚನಗಳಲ್ಲಿ ವಿವರಿಸಿದರು. ಕೊಲ್ಲದೆ, ಸುಳ್ಳುಹೇಳದೆ, ಎದಿರು ಹಳಿಯದೆ, ಅನ್ಯರಿಗೆ ಅಸಹ್ಯಪಡದೆ ಅಂತರಂಗ ಶುದ್ದನಾಗಿದ್ದರೆ ಸಾಕು ಅದರಿಂದಲೇ ನಮ್ಮ ಕೂಡಲ ಸಂಗಮ ದೇವರನ್ನು ಒಲಿಸಿಕೊಳ್ಳಬಹುದು. ಆ ಮೂಲಕವೇ ಅಂತರಂಗ, ಬಹಿರಂಗ ಶುದ್ದಿಯೇ ಧರ್ಮದ ತಿರುಳು ಎಂದು ಮನಸ್ಸಿನ ಮೈಲಿಗೆಯನ್ನು ಕಿತ್ತೊಗೆದವರು ವಚನಕಾರರು.
ನಡೆ ಮತ್ತು ನುಡಿಯ ಬಗ್ಗೆಯೂ ಬಸವಣ್ಣ, ಅಲ್ಲಮ, ಸಿದ್ದರಾಮ, ಚನ್ನಬಸವಣ್ಣ ಮುಂತಾದ ಶರಣರು ತಮ್ಮದೇ ಆದ ವ್ಯಾಖ್ಯಾನ ನೀಡಿದ್ದಾರೆ. ಆದ್ದರಿಂದಲೆ ಬಸವಣ್ಣ, "ನುಡಿದಂತೆರ ನಡೆಸು ನಡೆದಂತೆ ನುಡಿಸು, ನುಡಿ ನಡೆಗೆ ಭಿನ್ನವಾದರೆ ನಮ್ಮ ಶರಣರೊಪ್ಪರು" ಎಂದು ನಡೆ ಮತ್ತು ನುಡಿಯ ಸರಳ ರೇಖೆ ಎಳೆದ. ಹಾಗಾದರೆ ಭಕ್ತ ಎಂದರೆ ಹೇಗಿರಬೇಕು ಎಂದು ವಚನವೊಂದರಲ್ಲಿ ಹೀಗೆ ವಿವರಿಸಿದ್ದಾನೆ.

ಒಳಗೆ ಕುಟಿಲ, ಹೊರಗೆ ವಿನಯವಾಗಿ
ಭಕ್ತರೆನಿಸಿಕೊಂಬವರ
ಬಲ್ಲನೊಲ್ಲನಯ್ಯಾ ಲಿಂಗವು,
ಅವರು ಪಥಕ್ಕೆ ಸಲ್ಲರು ಸಲ್ಲರಯ್ಯಾ.
ಒಳಹೊರಗೊಂದಾಗದವರಿಗೆ
ಅಳಿಯಾಸೆದೋರಿ ಬಿಸಾಡುವನವರ
ಜಗದೀಶ ಕೂಡಲಸಂಗಮದೇವ.

ಆತ್ಮಶುದ್ಧಿ, ಕಾಯಕ ನಿಷ್ಟೆ, ಪರಧರ್ಮ ಸಹಿಷ್ಣುತೆ ಎನ್ನುವುದು ವಚನ ಯುಗದ ಬಹುದೊಡ್ಡ ಕೊಡುಗೆ. ಯಾರಿಗೂ ಕೇಡು ಬಯಸದ, ಎಲ್ಲೊರೊಳಗೊಂದಾಗಿ ಬದುಕಬೇಕು ಎನ್ನುವುದೇ ಅದರ ಮೂಲ ತಿರುಳು. ದೈಹಿಕ ಮತ್ತು ಆತ್ಮ ಶುದ್ಧಿ ಎನ್ನುವುದ ಬಹು ಮುಖ್ಯ ತತ್ತ್ವ. ಈ ಎಲ್ಲ ಕಾರಣಗಳಿಂದ ಮನುಷ್ಯನ ಶುದ್ಧ ಬದುಕಿನ ಎಲ್ಲ ಪರಿಕಲ್ಪನೆಗಳು ಇದರಲ್ಲಿ ಅಡಕವಾಗಿವೆ. ಮಾನವನ ದೇಹವನ್ನು ಮನೆಗೆ ಹೋಲಿಸಿದ ಬಸವಣ್ಣ ಅದರ ಶುದ್ಧತೆಯ ಬಗ್ಗೆ ಹೀಗೆ ಹೇಳಿದ್ದಾನೆ;

ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ
ಹೊಸ್ತಿಲಲ್ಲಿ ಹುಲ್ಲು ಹುಟ್ಟಿ, ಮನೆಯೊಳಗೆ ರಜ ತುಂಬಿ,
ಮನೆಯೊಳಗೆ ಮನೆಯೊಡೆಯನಿದ್ದಾನೊ, ಇಲ್ಲವೊ
ತನುವಿನಲ್ಲಿ ಹುಸಿ ತುಂಬಿ, ಮನದೊಳಗೆ ವಿಷಯ ತುಂಬಿ
ಮನದೊಳಗೊ[ಮನದೊ]ಡೆಯನಿದ್ದಾನೊ, ಇಲ್ಲವೊ
ಇಲ್ಲ, ಕೂಡಲಸಂಗಮದೇವಾ – ಎಂದು ಟೀಕಿಸಿದ್ದಾರೆ.

ಇಲ್ಲಿ ಮನೆ ಎನ್ನುವುದು ಭೌತಿಕ ಮನೆಯಲ್ಲ, ಅಂತರಂಗದ ಗೂಡು. ಮನುಷ್ಯ ಅದನ್ನು ಶುದ್ಧವಾಗಿಟ್ಟುಕೊಳ್ಳದಿದ್ದರೆ ಉಳಿದೆಲ್ಲವೂ ನಗಣ್ಯ ಎಂದು ವ್ಯಂಗ್ಯವಾಡಿದ್ದಾರೆ. ನಾವು ಕಾಯಾ, ವಾಚಾ, ಮನಸಾ ಶುದ್ಧವಾಗಿರಬೇಕು ಇಲ್ಲದಿದ್ದರೆ ನಮ್ಮ ಮನಸ್ಸು ಒಂದು ಕಡೆ, ಚಿಂತನೆ ಇನ್ನೊಂದು ಕಡೆ ಇದ್ದರೆ ಮನದಲ್ಲಿ ಕೊಳೆ ತುಂಬಿ ತುಳುಕುತ್ತದೆ ಎನ್ನವುದು ಈ ವಚನದ ಆಶಯ.
ಈಗ ಆತ್ಮ ಪರಮಾಮಾತ್ಮನ ಬಗ್ಗೆ ಭಾರಿ ಮಾತುಗಳು ಕೇಳಿ ಬರುತ್ತಿವೆ. ಪುನರ್ಜನ್ಮದ ಬಗ್ಗೆಯೂ ಮಾತನಾಡುತ್ತಿದ್ದಾರೆ. ಆತ್ಮಕ್ಕೆ ಸಾವಿಲ್ಲ ಎಂದು ವಾದಿಸುವವರು, ದೇಹ ಮಣ್ಣಾದ ಮೇಲೆ ಎಲ್ಲವೂ ಸಾವು ಎಂದು ತೀವ್ರವಾಗಿ ಹೇಳುವವರಿದ್ದಾರೆ. ಬಸವಣ್ಣ ಅದನ್ನು ವಚನದಲ್ಲಿ ಹೀಗೆ ಹೇಳಿದ್ದಾರೆ.

ಎನಗೆ ಜನನವಾಯಿತ್ತೆಂಬರು ಎನಗೆ ಜನನವಿಲ್ಲವಯ್ಯಾ,
ಎನಗೆ ಮರಣವಾಯಿತ್ತೆಂಬರು ಎನಗೆ ಮರಣವಿಲ್ಲವಯ್ಯಾ.
ಜನನವಾದಡೆ ನಿಮ್ಮ ಪಾದೋದಕ ಪ್ರಸಾದವ ಕೊಂಬೆ,
ಮರಣವಾದಡೆ ನಿಮ್ಮ ಶ್ರೀಚರಣವನೆಯ್ದುವೆ.
ಬಾವನ್ನದ ವೃಕ್ಷವು ಊರೊಳಗಿದ್ದಡೇನು,
ಅಡವಿಯೊಳಗಿದ್ದಡೇನು
ಪರಿಮಳ ಒಂದೇ, ಕೂಡಲಸಂಗಮದೇವಾ.

ಇಲ್ಲಿ ನಾವು ಗ್ರಹಿಸ ಬೇಕಾಗಿರುವುದು ನನಗೆ ಮರಣವೂ ಇಲ್ಲ ಜನನವೂ ಇಲ್ಲ ಇರುವುದು ನಿಮ್ಮ ಭಕ್ತಿ. ಆದಕ್ಕೆ ನೀವೇ ಪ್ರಮಾಣು. ಆನನವೇ ನಿಮ್ಮ ಪಾದೋದಕ, ಪ್ರಸಾದ. ಮರಣವೆಂದರೆ ಅದೇ ನಿಮ್ಮ ಶ್ರೀಚರಣ ಎಂದು ಜನನ ಮರಗಳನ್ನು ದೈವಕ್ಕೆ ಅರ್ಪಿಸಿದ್ದಾರೆ. ಧರ್ಮದ ಮುಖ್ಯ ಉದ್ದೇಶವೇ ದಯೆ ಅದನ್ನು ಪಾಲಿಸದಿದ್ದರೆ ಧರ್ಮಕ್ಕೆ ಅರ್ಥವೇ ಇಲ್ಲ.

ದಯವಿಲ್ಲದ ಧರ್ಮವದೇವುದಯ್ಯ?
ದಯವೇ ಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ!
ದಯವೇ ಧರ್ಮದ ಮೂಲವಯ್ಯ
ಕೂಡಲ ಸಂಗಯ್ಯನಂತಲ್ಲದೊಲ್ಲನಯ್ಯ!

ಎಲ್ಲಾ ಧರ್ಮಗಳು ಪ್ರತಿಪಾದಿಸುವುದು ದಯೆ, ದಯವೇ ಧರ್ಮದ ಮೂಲಾಂಶ, ಸಮಷ್ಟಿ ಹಿತವನ್ನು ಸಾಧಿಸಬೇಕಾದರೆ ದಯವಿರಬೇಕು ಸಕಲ ಪ್ರಾಣಿಗಳಲ್ಲಿ. ದಯವೇ ಇಲ್ಲದಿದ್ದರೆ ಅಲ್ಲಿ ದ್ವೇಷ ರಾಗಗಳು ವಿಜೃಂಭಿಸಿ ಸರ್ವನಾಶಕ್ಕೆ ಕಾರಣವಾಗುತ್ತದೆ. ಆಯಾ ಧರ್ಮ ಸ್ಥಾಪಕರು, ಪ್ರವರ್ತಕರು ದಯೆಗೆ ಪ್ರಥಮಸ್ಥಾನ ಕೊಟ್ಟಿದ್ದಲ್ಲದೆ ದಯವೇ ಧರ್ಮದ ಮೂಲಾಂಶವನ್ನಾಗಿಸಿದ್ದಾರೆ.

ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ
ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ
ಇದೇ ಅಂತರಂಗ ಶುದ್ಧಿ! ಇದೇ ಬಹಿರಂಗ ಶುದ್ಧಿ
ಇದೇ ನಮ್ಮ ಕೂಡಲ ಸಂಗಮದೇವನೊಲಿಸುವ ಪರಿ!!

ಕಳ್ಳತನ ಮಾಡಬೇಡ, ಕೊಲ್ಲಬೇಡ, ಕೋಪಿಸಿಕೊಳ್ಳಬೇಡ, ಪರರ ದೂಷಣೆ ಮಾಡಬೇಡ, ಆತ್ಮ ಪ್ರಶಂಸೆಯಲ್ಲಿ ತೊಡಗಬೇಡ? ಇವುಗಳನ್ನು ಪಾಲಿಸುತ್ತ ಬಂದಲ್ಲಿ ಅಂತರಂಗವೂ–ಬಹಿರಂಗವೂ ಶುದ್ಧಿಯಾಗಿರುವುದು, ಇದೇ ಮಾರ್ಗ ದೇವರನೊಲಿಸುಕೊಳ್ಳುವುದು. ಆತ್ಮೋದ್ಧಾರಕ್ಕೆ ಆತ್ಮಶುದ್ಧಿಗೆ ಇದೇ ಸರಳ ಮಾರ್ಗ ಎಂದು ಬಸವಣ್ಣ ತಿಳಿಸಿದ್ದಾರೆ.

**ಗ್ರಂಥ ಋಣ**

1. ಕನ್ನಡ ವಚನ ಮೀಮಾಂಸೆ – ಪ್ರೊ.ಗಿರಡ್ಡಿಗೋವಿಂದರಾಜ
2. ಸಂಸ್ಕೃತಿ ಕಥನ – ಪ್ರೊ. ಡಿ.ಆರ್.ನಾಗರಾಜು
3. ಸಮಗ್ರ ವಚನ ಸಂಪುಟ – ಡಾ.ಎಂ.ಎಂ.ಕಲ್ಬುರ್ಗಿ
4. ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ – ಪ್ರೊ.ಡಿ.ಆರ್.ನಾಗರಾಜು